## ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

ಸಿ.ಸಿ. ನಂ.505/2024

| | | |
|---|---|---|
| ಸಾಕ್ಷಿದಾರರ ಹೆಸರು | ದರ್ಶನ್ ಕುಮಾರ್ ಪಿ ಚೌದರಿ | ಸಿ.ಡಬ್ಲ್ಯು-5 |
| ತಂದೆಯ ಹೆಸರು | ಪುಂಡಲೀಕ ಚೌದರಿ | ಪಿ .ಡಬ್ಲ್ಯೂ-5 |
| ವಯಸ್ಸು | 23 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ವಿದ್ಯಾರ್ಥಿ | ದಿನಾಂಕಃ |
| ವಾಸಃ | ಸಾಗರ | 04.08.2026 |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

**1.** ಚಾ.ಸಾ 1 ಮತ್ತು 4 ನನ್ನ ತಂದೆ, ತಾಯಿ. ಚಾ.ಸಾ 2, 3, 6 ಮತ್ತು 7 ರವರ ಪರಿಚಯ ಇದೆ. ಆರೋಪಿತನು ಗೊತ್ತು.

**2.** ಚಾ.ಸಾ 1 ರವರು ನನ್ನ ತಂದೆಯಾಗಿದ್ದು, ಅವರು ಅಂಚೆ ಪಾಲಕರಾಗಿ ಕೆಲಸ ಮಾಡುತ್ತಿದ್ದಾರೆ. ದಿನಾಂಕ 18.01.2024 ರಂದು ನನ್ನ ತಂದೆ ಗಾಂಧಿ ನಗರದಲ್ಲಿ ಕರ್ತವ್ಯಕ್ಕಾಗಿ ಬೆಳಿಗ್ಗೆ ಸುಮಾರು 09.00 ಗಂಟೆಗೆ ಮನೆಯಿಂದ ಹೊರಟರು. ಮಧ್ಯಾಹ್ನ 01.00-01.15 ಗಂಟೆ ಸುಮಾರಿಗೆ ಚಾ.ಸಾ 3 ರವರು ನನ್ನ ತಾಯಿಗೆ ಕರೆ ಮಾಡಿ, ಚಾ.ಸಾ 1 ರವರು ಟೀ ಕುಡಿಯಲು ಆರೋಪಿತನ ಹೊಟೇಲಿಗೆ ಬಂದಾಗ ಆರೋಪಿತನು ಅವರಿಗೆ ಹಲ್ಲೆ ಮಾಡಿದ್ದರಿಂದ ಅವರಿಗೆ ಗಾಯವಾಗಿದ್ದು, ಆಸ್ಪತ್ರೆಗೆ ದಾಖಲು ಮಾಡಿದ್ದೇವೆ ಎಂದು ಹೇಳಿದರು. ಕೂಡಲೇ ನಾನು ಮತ್ತು ಚಾ.ಸಾ 4 ರವರು ಸಾಗರದ ಸರ್ಕಾರಿ ಆಸ್ಪತ್ರೆಗೆ ಹೋದಾಗ ಚಾ.ಸಾ 1 ರವರು ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ನಾವು ನೋಡಿದಾಗ ಚಾ.ಸಾ 1 ರವರ ಹಣೆ ಮತ್ತು ಮೂಗಿನ ಮೇಲೆ ರಕ್ತ ಗಾಯವಾಗಿತ್ತು ಹಾಗೂ ಅವರ ಬಟ್ಟೆ ರಕ್ತದ ಕಲೆಯಾಗಿತ್ತು. ನಂತರ ಚಾ.ಸಾ 1 ರವರನ್ನು ವಾರ್ಡಿಗೆ ಶಿಫ್ಟ್ ಮಾಡಿದರು. ನಾನು ಹೋಗಿ ವಿಚಾರಿಸಿದಾಗ, ಚಾ.ಸಾ 1 ರವರು ಆರೋಪಿತನ ಹೊಟೇಲಿಗೆ ಹೋಗಿ ನನಗೆ ಕೊಡಬೇಕಾದ 4 ಲಕ್ಷ ರೂ. ಹಣ ಕೊಡು ಎಂದು ಕೇಳಿದ್ದಕ್ಕೆ, ಆರೋಪಿತನು ಅವಾಚ್ಯವಾಗಿ ಬೈಯ್ದು, ಕೊರಳಪಟ್ಟಿ ಹಿಡಿದು, ಚಾ.ಸಾ 1 ರವರ ಹಣೆ ಮತ್ತು ಮೂಗಿಗೆ ಎಂ.ಒ-1 ಮತ್ತು 2 ರಿಂದ ಹಲ್ಲೆ ಮಾಡಿದನು ಎಂದು ತಿಳಿಸಿದರು.

**3.** ನಂತರ ಚಾ.ಸಾ 1 ರವರು ಸಾಗರದ ಪೋಲಿಸ್ ಠಾಣೆಗೆ ಹೋಗಿ ದೂರನ್ನು ನೀಡಿದರು. ದೂರಿನ ವಿಚಾರವಾಗಿ ಪೋಲಿಸರು ನನ್ನನ್ನು ವಿಚಾರಣೆ ಮಾಡಿದ್ದಾರೆ.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ. ಡಿ.ಎಂ.ಆರ್ ರವರಿಂದಃ–**

**1.** ಘಟನೆಯನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ. ಚಾ.ಸಾ 3 ರವರು ನನಗೆ ಪರಿಚಯಸ್ಥರು ಮತ್ತು ಆಪ್ತರು ಎಂದರೆ ಸರಿ. ಆರೋಪಿತನು ನನ್ನ ತಂದೆಗೆ ಹಣ ಕೊಡಬೇಕು ಎನ್ನುವುದು ನನಗೆ ಗೊತ್ತಿತ್ತು. ಘಟನೆಯ ಕುರಿತು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ. ಆದರೆ ಅವರು ಹೇಳಿಕೆಯನ್ನು ಬರೆದುಕೊಂಡಿದ್ದಾರೋ, ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಹೇಳಿಕೆಯಲ್ಲಿ ಪೋಲಿಸರು ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಚಾ.ಸಾ 1 ರವರು ಎಲ್ಲಿಯೋ ಬಿದ್ದು ಗಾಯ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಗಾಯಗಳ ಆಧಾರದ ಮೇಲೆ ಆರೋಪಿತನಿಂದ ಬರಬೇಕು ಎನ್ನುವ ಹಣವನ್ನು ವಸೂಲಿ ಮಾಡಲು ಉದ್ದೇಶಿಸಿ ಈ ಪ್ರಕರಣ ದಾಖಲು ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ಘಟನೆಗೂ ಮತ್ತು ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.